4. ಗುತ್ತಿಗೆದಾರರಿಗೆ ಮೊಬಿಲೈಸೇಷನ್‌ಗಾಗಿ ಮುಂಗಡ ನೀಡುತ್ತಿದ್ದು ಅದರ ಜೊತೆಯಲಿ ಸಾಮಗ್ರಿಗಳು ಮತ್ತು ಯಂತ್ರೋಪಕರಣಗಳಿಗಾಗಿ ಮುಂಗಡ ನೀಡಲಾಗುತ್ತಿದೆ.

ಪೌರ ಕಾರ್ಮಿಕರ ನೇಮಕ

446(307) ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮೀ ಲೇಔಟ್)

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರ ಸಂಖ್ಯೆ ಎಷ್ಟು;

ಆ) ಐ.ಪಿ:ಡಿ. ಸಾಲಪ್ಪ ವರದಿ ಪ್ರಕಾರ ಎಷ್ಟು ಜನರನ್ನು ಜನಸಂಖ್ಯೆ ಆಧಾರದ ಮೇಲೆ ನೇಮಕಾತಿ ಮಾಡಕೊಳ್ಳಬೇಕು;

ಇ) ಹೊಸದಾಗಿ ಪೌರಕಾರ್ಮಿಕರನ್ನು ನೇಮಕಾತಿ ಮಾಡಿಕೊಳ್ಳಲು ಸರ್ಕಾರ ಕೈಗೊಂಡ ಕ್ರಮಗಳೇನು;

ಈ) ಈ ಪೌರಕಾರ್ಮಿಕರನ್ನು ಹೊರಗುತ್ತಿಗೆ ಅಥವಾ ನೇರ ನೇಮಕಾತಿ ಮಾಡಿಕೊಳ್ಳಲಾಗುವುದೇ

ಉ) ಕಾರ್ಮಿಕರನ್ನು ನೇಮಕ ಮಾಡುವಾಗ ಅನುಸರಿಸುವ ಮಾನದಂಡವೇನು ಇವರಿಗೆ ನೀಡುವ ವೇತನವೆಷ್ಟು?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಯವರು)

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರು ಸಂಖ್ಯೆ 2700

ಆ) ಐ.ಪಿ.ಡಿ. ಸಾಲಪ್ಪ ವರದಿಯನ್ವಯ ನಗರ ಪ್ರದೇಶಗಳಲ್ಲಿ 500 ಜನಸಂಖ್ಯೆಗೆ ಒಬ್ಬ ಪೌರಕಾರ್ಮಿಕರಂತೆ ನೇಮಕಾತಿ ಮಾಡಿಕೊಳ್ಳಬೇಕಾಗಿರುತ್ತದೆ.

ಇ) ಸರ್ಕಾರದ ಪತ್ರ ಸಂಖ್ಯೆ ನಅಇ 684 ಎಂಎನ್‌ವೈ 2010 ದಿನಾಂಕ 05/10/2013 ರಲ್ಲಿ 4000 ಪೌರಕಾರ್ಮಿಕರು ಹುದ್ದೆಗಳನ್ನು ಪ್ರಸ್ತುತ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಅನುಮತಿಯನ್ನು ನೀಡಲಾಗಿದೆ.

ಈ) 4000 ಮಂದಿ ಪೌರಕಾರ್ಮಿಕರುಗಳನ್ನು ನೇರ ನೇಮಕಾತಿ ಮೂಲಕ ನೇಮಕಾತಿ ಮಾಡಿಕೊಳ್ಳಲಾಗಿದೆ.

ಉ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಪ್ರಚಲಿತ ವೃಂದ ಮತ್ತು ನೇಮಕಾತಿ ನಿಯಾಮಾವಳಿಗಳನ್ವಯ ನೇಮಕಾತಿ ಮಾಡಿಕೊಳ್ಳಲಾಗುವುದು.

ಪೌರಕಾರ್ಮಿಕರುಗಳಿಗೆ ಮಾಸಿಕವಾಗಿ ನೀಡಲಾಗುವ ಪ್ರಸ್ತಕ ವೇತನ ಶ್ರೇಣಿ ರೂ 9600–14550 ಹಾಗೂ ವೇತನ ವಿವರಗಳು ಈ ಕೆಳಕಂಡಂತಿದೆ.

ಕ್ರ.ಸಂ.	ವೇತನ/ಭತ್ಯೆಗಳು	ಮೊತ್ತ
1	ಮೂಲ ವೇತನ	₹.9600–00
2	ತುಟ್ಟಿಭತ್ಯೆ	₹ 1440–00
3	ಮನೆ ಬಾಡಿಗೆ ಭತ್ಯೆ	₹.2880–00
4	ನಗರ ಪರಿಹಾರ ಭತ್ಯೆ	₹.350–00
5	ವೈದ್ಯಕೀಯ ಭತ್ಯೆ	₹ 100–00
6	ಸಮವಸ್ತ್ರ ಭತ್ಯೆ	₹ 300–00
	ಒಟ್ಟು	**₹ 14670–00**